# ಸ್ವಾಮಿ ಅಖಂಡಾನಂದರ ಒಂದು ಪತ್ರ

## [ಆಲ್ಮೋರ ನಿವಾಸಿಯಾದ ಲಾಲಾ ಬದರಿ ಸಾಹಜಿ ಅವರಿಗೆ]

ಅನುವಾದ : ಬ್ರಹ್ಮಚಾರಿ ಮುಕುಂದ

ಶ್ರೀಶ್ರೀ ರಾಮಕೃಷ್ಣ ಶರಣಮ್

ನಾಥ್‌ವಾಡಾ
ಮೇವಾಡ್
ರಾಜಾಸ್ಥಾನ್
**[1896]**

ಪ್ರಿಯ ಸಾಹಜಿ ಮಹಾಶಯ,

ನಿನ್ನ ಕಾಗದ ಹಾಗೂ ನೀನು ಕಳುಹಿಸಿದ ಒಂದು ಪೌಂಡು ಚಹಾ ಸರಿಯಾದ ಸಮಯಕ್ಕೆ ಇಲ್ಲಿ ಬಂದು ಸೇರಿದೆ. ಸ್ವಾಮಿ ಸುಬೋಧಾನಂದರು ಮಠಕ್ಕೆ ಹೋಗಿ ಸೇರಿರುವುದರ ಸುದ್ದಿಯನ್ನು ಪಡೆದು ನಾನು ಬಹಳ ಆನಂದಿತನಾಗಿರುವೆನು.

ನಿನ್ನ ಶ್ರೀರಾಮಕೃಷ್ಣರ ಸೇವೆಯು ಹೇಗೆ ಸಾಗುತ್ತಿದೆ? ಆಗಾಗ ಮಠದಿಂದ ಸುದ್ದಿಯನ್ನು ಪಡೆಯುತ್ತಿರುವೆಯೊ ಇಲ್ಲವೊ? ನಿನ್ನ ಸಹೋದರರಲ್ಲಿ ಈಗ ಯಾರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿದ್ದಾರೆ? ನಿನ್ನ ವ್ಯಾಪಾರದ ಪ್ರಗತಿ ಹೇಗಿದೆ? ನಿನ್ನ ಸಹೋದರರಿಗೆ ಮುತುವರ್ಜಿಯಿಂದ ಶಿಕ್ಷಣ ನೀಡಿಸು.

ನಿನ್ನ ಸಮಯವನ್ನು ನಷ್ಟಮಾಡಬೇಡ. ಇದನ್ನು ಮನದಲ್ಲಿ ಧರಿಸು; ಆಲಸ್ಯವೇ ಎಲ್ಲ ರೀತಿಯ ಪಾಪಗಳಿಗೆ ಕಾರಣ. ಭಾರತದಲ್ಲಿರುವ ಹೆಚ್ಚು ಕಡಿಮೆ ಎಲ್ಲ ಶ್ರೀಮಂತರಲ್ಲೂ ಈಗ ಈ ಶನಿಸಂತಾನ ಅಧಿಕವಾಗಿ ವೃದ್ಧಿಯಾಗುತ್ತಿದೆ. ಯಾರು ಸ್ಥಿತಿವಂತರೋ ಅವರು ಇತರರೆಡೆಗೆ ಎಳ್ಳಷ್ಟೂ ಗಮನ ಹರಿಸರು. ಅವರು, ಈ ಜಗತ್ತು ಅವರ ಭೋಗಪಾತ್ರೆಯೊ ಏನೊ ಎಂಬಂತೆ ಆಚರಿಸುತ್ತಿದ್ದಾರೆ. ಆದರೆ ಆ ಮೂರ್ಖರಿಗೆ ತಿಳಿಯದು. ಇಂದು ಭಾರತದಲ್ಲಿ ಅವರು ಏನನ್ನು ಸುಖವೆಂದು ತಿಳಿದಿರುವರೊ ಅವೆಲ್ಲವೂ ಇಂದ್ರಜಾಲದಂತೆ ತೋರಿಕೆ ಮಾತ್ರ ಎಂದು. ವಾಸ್ತವವಾಗಿ, ಇಂದು ಬಹಳ ಮಂದಿಗೆ ಒಂದು ತುಣುಕು ರೊಟ್ಟಿಗೂ ಗತಿಯಿಲ್ಲ. ಇಂತಹ ಅನಿಶ್ಚಿತ ಪರಿಸ್ಥಿತಿಗಳಲ್ಲಿ ಭಾರತೀಯರ ಕರ್ತವ್ಯವೇನು? ಮೊದಲನೆಯದಾಗಿ, ನನಗನಿಸುತ್ತದೆ, ನಾವು ಕೃಷಿಕರ ಉನ್ನತಿಗಾಗಿ ಪ್ರಯತ್ನಿಸಬೇಕು.

ಏಕೆಂದರೆ ಭಾರತದಲ್ಲಿ ಕೃಷಿಕರೇ ಬಹುಸಂಖ್ಯಾತರು. ೨೫ ಕೋಟಿ ಭಾರತೀಯರಲ್ಲಿ ಶೇಕಡ ಎಂಬತ್ತಮೂರು ರೈತವರ್ಗಕ್ಕೆ ಸೇರಿದವರು. ಈಗ ಯೋಚಿಸಿ ನೋಡು, ಆ ೨೫ ಕೋಟಿಯಲ್ಲಿ ಎಷ್ಟು ಮಂದಿ ರೈತರಿರಬಹುದೆಂದು? ಅಷ್ಟೇ ಅಲ್ಲದೆ ಪ್ರತಿಯೊಬ್ಬರಿಗೂ ಅಶನ-ವಸನಗಳನ್ನು ಪೂರೈಸುತ್ತಿರುವವರು ಈ ಜನರೇ. ಆದರೆ ಇಂದು ಭಾರತದಲ್ಲಿ ಎಂತಹ ವೈಪರೀತ್ಯ ಕಾಣಬರುತ್ತಿದೆಯೆಂದರೆ ಕೇವಲ ಈ ಮಂದಿಯೇ ಹೊಟ್ಟೆ-ಬಟ್ಟೆಗಿಲ್ಲದೆ ಸಾಯುತ್ತಿದ್ದಾರೆ.

ಭಾರತದ ಕೃಷಿಕರ ಸ್ಥಿತಿಯನ್ನು ಕಂಡ ಅಲೆಗ್ಸಾಂಡರ್‌ನಿಗೆ ಅತ್ಯಾಶ್ಚರ್ಯವಾಯಿತು. ಆಗಿನ ಕಾಲದ ಭಾರತದ ರಾಜಕೀಯ ಸ್ಥಿತಿಗತಿ ಹೇಗಿತ್ತೆಂದರೆ ರಾಷ್ಟ್ರವು ಮಹತ್ತರವಾದ ವಿಪತ್ತಿನಲ್ಲಿದ್ದರೂ ಸಾಮಾನ್ಯ ಜನರು ಮಾತ್ರ ಸದಾ ಭಯ, ಚಿಂತೆಗಳಿಂದ ಮುಕ್ತರಾಗಿದ್ದರು. ಇಂದು ಅದೇ ಸಾಮಾನ್ಯ ಜನರು ವೈವಿಧ್ಯಮಯವಾದ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಈ ಪಾಪಕ್ಕೆ ಎರಡು ವರ್ಗದ ಜನಗಳು ಹೊಣೆಗಾರರು. ಜಮೀನ್ದಾರರು ಹಾಗೂ ಲೇವಾದೇವಿಯವರು. ಈ ಇಬ್ಬರು ದೊಡ್ಡ ದೈತ್ಯರು ಜನಸಾಮಾನ್ಯರನ್ನು ಇಕ್ಕೆಲಗಳಿಂದಲೂ ಆಕ್ರಮಿಸುತ್ತಿದ್ದಾರೆ. ಆದರೆ ಆ ನಿಷ್ಕಾಮ, ಪವಿತ್ರ ಹೃದಯದ ಕೃಷಿಕರು ತಮ್ಮ ಕರ್ತವ್ಯದಿಂದ ವಿಮುಖರಾಗಿಲ್ಲ. ಓಹ್! ಧನ್ಯ ಅವರ ನಿಃಸ್ವಾರ್ಥತೆ! ಧನ್ಯ ಅವರ ಸಹನೆ! ಧನ್ಯ ಅವರ ಶ್ರಮ! ಸ್ವಲ್ಪ ಆಲೋಚಿಸು. ಒಂದು ವೇಳೆ ಈ ರೈತರೇನಾದರೂ ತಮ್ಮ ನೇಗಿಲುಗಳನ್ನು ಬಿಸುಟು ನಿಷ್ಕ್ರಿಯರಾದರೆಂದರೆ ಈ ನಗರವಾಸಿಗಳ, ಈ ಜಮೀನ್ದಾರರ ಪಾಡೇನಾದೀತೆಂದು? ಮತ್ತೆ ಎಲ್ಲಿಂದ ಬರುವುದಾಗ ? ರುಚಿರುಚಿಯಾದ ಆಹಾರ ಎಲ್ಲಿಂದ ಬರುವುದಾಗ? ರೇಷ್ಮೆ ಹೊದಿಕೆಗಳು ಎಲ್ಲಿಂದ ಬಂದೀತು? ಈ ಎಲ್ಲ ಸಂಪತ್ತು ಕೇವಲ ಅವರ ದುಡಿಮೆಯ ಫಲ. ಆದರೆ ಈ ದುಷ್ಟ ಜಮೀನ್ದಾರರು, ನಗರವಾಸಿಗಳು ಅವರನ್ನು ಅವರಿಗೆ ದೊರಕಬೇಕಾದ ಫಲದಿಂದ ವಂಚಿತರಾಗಿಸುತ್ತಿರುವರು. ಇಷ್ಟಾಗಿಯೂ ಈ ಮುಗ್ಧ ರೈತರ ಶುದ್ಧ ಹೃದಯಗಳಲ್ಲಿ ಪ್ರತೀಕಾರದ ಬೀಜಕ್ಕೆ ಪ್ರವೇಶ ಗಳಿಸಲು ಸಾಧ್ಯವಾಗದು. ಈ ಕೃಷಿಕ ಹಾಗೂ ಕಾರ್ಮಿಕ ಜನರೆ ಸಮಾಜದ ನಿಜವಾದ ಅಡಿಪಾಯ ಹಾಗೂ ಸಮಾಜವೆಂಬ ಶರೀರಕ್ಕೆ

ನರವ್ಯೂಹಗಳಂತಿರುವವರು ಎಂಬುದರಲ್ಲಿ ನಿನಗಾವ ಸಂಶಯವೂ ಇಲ್ಲ ಎಂದು ನಂಬುತ್ತೇನೆ. ಅವರ ಹೊರತು ಸಮಾಜಕ್ಕೆ ಅರೆ ಕ್ಷಣದ ಅಸ್ತಿತ್ವವೂ ಇಲ್ಲ. ಆದ್ದರಿಂದ ನೀನು ಗುಡ್ಡಗಾಡಿನ ಆ ರೈತರಿಗೆ ಕನಿಷ್ಠಸಾಧ್ಯ ಬಡ್ಡಿಯ ಮೇಲೆ ಹಣವನ್ನು ಸಾಲವಾಗಿ ನೀಡಬೇಕೆಂದು ನಾನು ನಿನ್ನನ್ನು ಕೇಳಿಕೊಳ್ಳುತ್ತೇನೆ. ನಿನ್ನ ಸಹೋದರರಲ್ಲಿ ಒಬ್ಬನಿಗೆ ಆಧುನಿಕ ಕೃಷಿಯಲ್ಲಿ ವಿದ್ಯಾಭ್ಯಾಸ ಕೊಡಿಸಿದ ಮೇಲೆ, ಅವನು ಆ ರೈತರಿಗೆ ಆಧುನಿಕ ರೀತಿಯ ಕೃಷಿಪದ್ಧತಿಯಲ್ಲಿ ಶಿಕ್ಷಣ ನೀಡಲಿ. ಭಾರತದ ರೈತರು ಕೃಷಿಕ್ಷೇತ್ರದಲ್ಲಿ ಎಷ್ಟು ಅಜ್ಞರೆಂದರೆ ಅವರಿಗೆ ಯೋಗ್ಯ ರೀತಿಯ ಕೃಷಿಗಾರಿಕೆಯೆಂದರೇನೆಂದೇ ತಿಳಿಯದು. ಈಗ ದಯವಿಟ್ಟು ಯೋಚಿಸಿ ನೋಡು, ಅಡಿಪಾಯವೇ ಇಷ್ಟು ದುರ್ಬಲವಾಗಿದೆಯೆಂದಮೇಲೆ ಕಟ್ಟಡವು ಸುಭದ್ರವಾಗಿರಲು ತಾನೆ ಹೇಗೆ ಸಾಧ್ಯ? ಅದೆಂದಿಗೂ ಆಗದು. ಆದ್ದರಿಂದ ನಾನು ನಿನಗೆ ಹೇಳುತ್ತೇನೆ, ನಿನ್ನ ಸ್ವಧರ್ಮವನ್ನೆಂದಿಗೂ ತ್ಯಜಿಸದಿರು. ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣನು ಹೇಳುವನು, "ಕೃಷಿ, ಗೋಪಾಲನೆ ಹಾಗೂ ವಾಣಿಜ್ಯ—ಇವುಗಳು ವೈಶ್ಯನ ಕರ್ತವ್ಯಗಳು" ಎಂದು. ಇವುಗಳಲ್ಲಿ ಕೃಷಿ ಹಾಗೂ ಗೋರಕ್ಷಣೆಗಳು ಮುಖ್ಯ ತರವಾದವು, ಏಕೆಂದರೆ ಗೋಸಂಪತ್ತು ಸರಿಯಾಗಿ ವೃದ್ಧಿಗೊಳ್ಳದೆ ಕೃಷಿಯು ಎಂದಿಗೂ ಸರಿಯಾದ ಬೆಳವಣಿಗೆಯನ್ನು ಕಾಣದು. ಕೃಷಿಯು ಅಭಿವೃದ್ಧಿಯನ್ನು ಹೊಂದದೆ ವಾಣಿಜ್ಯದ ಸೂಕ್ತ ಅಭಿವೃದ್ಧಿ ಎಂದಿಗೂ ಆಗದು. ಆದ್ದರಿಂದ "ಕೃಷಿ ಗೆಜೆಟ್" ಒಂದನ್ನು ಪಡೆ. ಅದನ್ನು ಅಧ್ಯಯಿಸಿದ ಮೇಲೆ, ಅದರಲ್ಲಿ ಕೊಟ್ಟಿರುವ ರೀತಿಯನ್ನಳವಡಿಸಿ ಆ ಪ್ರಾಂತ್ಯದ ಭೂಮಿಯು ಫಲವತ್ತಾಗುವಂತೆ ಮಾಡು. ಅದರಿಂದ ಹೆಚ್ಚಿನ ಇಳುವರಿಯನ್ನು ಗಳಿಸುವೆ. ಭಾರತದ ಕೃಷಿಕರಿಗೆ ಅದನ್ನು ಕಲಿಸಿದಲ್ಲಿ ರಾಷ್ಟ್ರಕ್ಕೆ ಹೆಚ್ಚಿನ ಲಾಭವಾಗುವುದು.

ಸ್ವಾಮಿ ವಿವೇಕಾನಂದರ ಆದೇಶದ ಮೇರೆಗೆ ನಾನು ಈ ಪ್ರಾಂತ್ಯದ ಜನಸಾಮಾನ್ಯರಲ್ಲಿ ವಿದ್ಯಾಭ್ಯಾಸ ಪ್ರಸಾರ ಮಾಡುವಲ್ಲಿ ಪ್ರಯತ್ನ ನಡೆಸುತ್ತಿದ್ದೇನೆ. ಆದರೆ ನನ್ನ ಕೆಲಸದಲ್ಲಿ ಸಹಾಯ ನೀಡುವ ಒಬ್ಬ ದೇಶಪ್ರೇಮಿಯೂ ಇಲ್ಲ ಇಲ್ಲಿ. ಸುಮಾರು ಒಂದು ತಿಂಗಳ ಹಿಂದೆ ಮುಂಬಯಿನಿಂದ ಇಲ್ಲಿಗೆ ಬಂದ ನನ್ನ ಗುರುದೇವನ ಭಕ್ತನಾದ ಒಬ್ಬ ಬಂಗಾಲಿ ಸಭ್ಯನು ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ನನಗೆ ಸಹಾಯ ಮಾಡುತ್ತಿರುವನು. ಆದರೆ ಈ ಕಾರ್ಯಕ್ಕೆ ಅವನೊಬ್ಬನಿದ್ದರೆ ಸಾಲದು. ಹಳ್ಳಿಯಿಂದ ಹಳ್ಳಿಗೆ, ಪಟ್ಟಣದಿಂದ ಪಟ್ಟಣಕ್ಕೆ ಲೌಕಿಕ ಹಾಗೂ ನೈತಿಕ ಶಿಕ್ಷಣ ಪ್ರಸಾರ ಮಾಡಲು ತಮ್ಮ ಜೀವನವನ್ನೆ ಮುಡಿಪಾಗಿರಿಸಬಲ್ಲ ಸಭ್ಯವ್ಯಕ್ತಿ ಯಾರಾದರೂ ನಿನಗೆ ಪರಿಚಿತರೇನು? ನಾನಿನ್ನೇನು ತಾನೆ ಹೇಳಲಿ; ನಿನಗೆ ಹಾಗೂ ಇತರರಿಗೆ ನನ್ನ ಆಶೀರ್ವಾದಗಳು.

ನಿನ್ನವ,

( ಪ್ರಬುದ್ಧಭಾರತ, ೧೯೦೮, ಪುಟ ೪೨೪ ) *ಅಖಂಡಾನಂದ*

## ಜೀವಂತ ಭಗವಂತ

ಯಾರು ನಿನ್ನೊಳಹೊರಗ ತುಂಬುತೆ
ದುಡಿವೆಲ್ಲ ಕೈಯಾಗಿರುವನೊ
ನಡೆವೆಲ್ಲ ಕಾಲಾಗಿರುವನೊ
ಎಲ್ಲರೊಡಲಾಗಿರುವನೊ

ಅವನನಾರಾಧಿಸುತ ಮುರಿದೆಸೆ
ಮಿಕ್ಕ ಮೂರ್ತಿಗಳೆಲ್ಲವ !

ಮೇಲು ಕೆಳಗುಗಳೆಲ್ಲ ವ್ಯಾಪಿಸಿ
ಪಾಪಿಯಲ್ಲಿಯು ಸಂತನಲ್ಲಿಯು
ದೇವನಲ್ಲಿಯು ಕೀಟದಲ್ಲಿಯು
ದಿಟದ ತಿಳಿವಾಗಿರುವನೊ

ಅವನನಾರಾಧಿಸುತ ಮುರಿದೆಸೆ
ಮಿಕ್ಕ ಮೂರ್ತಿಗಳೆಲ್ಲವ !

ಮೂಲ :
ಸ್ವಾಮಿ ವಿವೇಕಾನಂದ

ಅನುವಾದ:
ಹೆಚ್.ಎನ್.ಮುರಳೀಧರ

ಹಿಂದು ಮುಂದುಗಳಾರಲಿಲ್ಲವೊ
ಜನನಮರಣಗಳಿಲ್ಲವೊ,
ನಮ್ಮ ನಿತ್ಯದ ನೆಲೆಯದಾವನೊ,
ನಮ್ಮ ಇರುವಿಕೆಯೆಲ್ಲ ಸಂತತ
ಯಾರಲೊಂದಾಗಿರುವುದೊ

ಅವನನಾರಾಧಿಸುತ ಮುರಿದೆಸೆ
ಮಿಕ್ಕ ಮೂರ್ತಿಗಳೆಲ್ಲವ !

ಯಾರಪ್ರತಿಬಿಂಬಗಳು ಜಗದಲಿ
ಎಡೆಬಿಡದೆ ತುಂಬಿರುವವೋ
ಅವನ ಬೆಳಕಿಗೆ ಕುರುಡರಾಗುತ
ನೆರಳುಗಳ ಹಿಂದೋಡುತ
ಭ್ರಾಂತಿಕದನದ ಕದವ ತೆರೆವೀ
ಮೂರ್ಖತನವಿನ್ನೇತಕೆಲ
ಯಾರು ಚೇತನದೇವನೆನಿಪನೊ

ಅವನನಾರಾಧಿಸುತ ಮುರಿದೆಸೆ
ಮಿಕ್ಕ ಮೂರ್ತಿಗಳೆಲ್ಲವ!

✻

( ವಿವೇಕಾನಂದ ಕವಿತಾವಳಿ *ಯಿಂದ* )